**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ:ಕಂಪ್ಲೆಂಟ್\ಉಪಲೋಕ್\ಬಿಜಿಎಂ\3226\2019\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:30/01/2021

**ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ \ ಸಾರ್ವಜನಿಕ ನೌಕರರಾದ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ 1) ಆಹೆಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ.ಶಿವಾನಂದ ಬಿ ತೇಗೂರ; ಹಾಗೂ ಎಸ್‌ಡಿಎಂಸಿ 2)ಅಧ್ಯಕ್ಷರಾದ ಶ್ರೀ.ಮಂಜುನಾಥ ಸಿ ಹುಲಿಮನಿ; ಸದಸ್ಯರುಗಳಾದ 3) ಶ್ರೀ.ಮಾರುತಿ ಭಜಂತ್ರಿ; 4) ಶ್ರೀ.ಮಸ್ತಾನ್‌ಸಾಬ್ ನದಾಫ್; 5)ಶ್ರೀಮತಿ.ಗಂಗಮ್ಮ ರೇವಡಗಿ; ಮತ್ತು 6) ಶ್ರೀಮತಿ.ಅನ್ನಪೂರ್ಣ ಜಗದಣ್ಣವರ ರವರ ವಿರುದ್ಧದ ದುರ್ನಡತೆ \ ಕರ್ತವ್ಯ ಲೋಪದ ಬಗ್ಗೆ.

******

ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಗುಡಿಸಾಗರ ಗ್ರಾಮದ ನಿವಾಸಿಯಾದ ಶ್ರೀ.ವಿರೂಪಾಕ್ಷಗೌಡ ಎಸ್ ಕುಲಕರ್ಣಿ (ಇನ್ನು ಮುಂದೆ, 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕ್ ಆಹೆಟ್ಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ.ಶಿವಾನಂದ ಬಿ ತೇಗೂರ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧದ ದುರ್ನಡತೆ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ, ಕಲಂ 9ರಡಿ ತನಿಖೆಗೆ ತೆಗೆದುಕೊಂಡಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಹೆಟ್ಟಿ, ನವಲಗುಂದ ತಾಲ್ಲೂಕ್ ಇಲ್ಲಿ 2019-20ನೇ ಸಾಲಿನಲ್ಲಿ ಷೂ ಮತ್ತು ಸಾಕ್ಸ್ ಖರೀದಿಗೆ ಕಡಿಮೆ ಬೆಲೆ ನಮೂದಿಸಿರುವ ದರಪಟ್ಟಿಯನ್ನು ಆಯ್ಕೆ ಮಾಡದೇ ಹೆಚ್ಚಿನ ಬೆಲೆಯಿರುವ ದರಪಟ್ಟಿಯನ್ನು ಆಯ್ಕೆ ಮಾಡಿ, ಭ್ರಷ್ಟಾಚಾರ ಎಸಗಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ದೂರುದಾರರು ಶ್ರೀ ಆರೂಡ ಎಂಟರ್‌ಪ್ರೈಸಸ್ ಸಂಸ್ಥೆಯ ಪಾಲುದಾರರಾಗಿದ್ದು, ಕಾನೂನನ್ನು ದುರುಪಯೋಗ ಪಡಿಸಿಕೊಂಡು ಮಾಹಿತಿ ಪಡೆದು ಸುಳ್ಳು ದೂರನ್ನು ಸಲ್ಲಿಸಿದ್ದಾರೆಂದು ಹೇಳುತ್ತಾ,

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಯ ಠರಾವು \ ನಿರ್ಣಯದಂತೆ ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸಿದೆಯೆಂದು ಹೇಳಿದ್ದಾರೆ.

4. ಆಕ್ಷೇಪಣೆಯೊಂದಿಗೆ ಎದುರುದಾರರು ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಿದ್ದಾರೆ –

1) ದಿನಾಂಕ:23/09/19ರ ಎಸ್‌ಡಿಎಂಸಿ ನಡವಳಿ;
2) ದಿ:25/09/19ರ ಸರಬರಾಜು ಆದೇಶ;
3) ಶೂ ಜೋನ್, ಧಾರವಾಡ ಸಂಸ್ಥೆಯ ದಿ:01/10/19ರ ಬಿಲ್ ಸಂಖ್ಯೆ:25;
4) ಶ್ರೀ ಆರೋಡಾ ಎಂಟರ್‌ಪ್ರೈಸಸ್, ನವಲಗುಂದ [ದಿ:16/08/19] ರ ದರಪಟ್ಟಿ;
5) ಶೂ ಜೋನ್, ಧಾರವಾಡ; ವಿಜಯ ಫುಟ್‌ವೇರ್, ಧಾರವಾಡ; ಬಿಜಾಪುರ ಫುಟ್‌ವೇರ್, ಕಿತ್ತೂರು; ಶ್ರೀ ಬಾಲಾಜಿ ಡ್ರೆಸಸ್, ಧಾರವಾಡ; ಸಂಜಯ ಏಜೆನ್ಸಿ, ಹುಬ್ಬಳ್ಳಿ; ಮತ್ತು ಎಸ್‌ವಿಆರ್ ಫುಟ್‌ವೇರ್, ಬೆಳಗಾವಿ ಸಂಸ್ಥೆಗಳ ದರಪಟ್ಟಿಗಳು [ದರಪಟ್ಟಿಗಳಲ್ಲಿ ದಿನಾಂಕಗಳನ್ನು ನಮೂದಿಸಿಲ್ಲ]; ಹಾಗೂ
6) ಗುಣಮಟ್ಟ ಪ್ರಮಾಣ ಪತ್ರ.

5. ಕ್ಷೇತ್ರ ಶಿಕ್ಷಣಾಧಿಕಾರಿಗಳು, ನವಲಗುಂದ ತಾಲ್ಲೂಕ್ ರವರಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಹೆಟ್ಟಿ, ನವಲಗುಂದ ತಾಲ್ಲೂಕ್ ಇಲ್ಲಿ 2019–20ನೇ ಸಾಲಿನಲ್ಲಿ ಷೂ ಮತ್ತು ಸಾಕ್ಸ್ ಖರೀದಿಗೆ ಸಂಬಂಧಿಸಿದ ದಾಖಲೆಗಳನ್ನು ವರದಿಯೊಂದಿಗೆ ಪಡೆದಿದೆ. ಶಾಲಾ ಮುಖ್ಯೋಪಾಧ್ಯಾಯರು ಖರೀದಿ ನಿಯಮದಂತೆ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿ ಮಾಡದೇ ಇರುವುದು ದಾಖಲೆಗಳಲ್ಲಿ ಕಂಡು ಬಂದಿದೆಯೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವರದಿಯಲ್ಲಿ ಹೇಳಿದ್ದಾರೆ.

6. ಖರೀದಿ ಪ್ರಕ್ರಿಯೆ ನಡೆಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಹೆಟ್ಟಿ, ನವಲಗುಂದ ತಾಲ್ಲೂಕ್ ಇಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಈ ಕೆಳಗೆ ನಮೂದಿಸಿದ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು 2 ರಿಂದ 6ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ದೂರಿಗೆ ಆಕ್ಷೇಪಣೆಯನ್ನು ಕೇಳಿದೆ –

| ಕ್ರ.ಸಂ. | ಹೆಸರು ಶ್ರೀಯುತ\ ಶ್ರೀಮತಿ | ಹುದ್ದೆ |
|---|---|---|

BGM/3226/19



| | | |
|---|---|---|
| 1 | ಮಂಜುನಾಥ ಸಿ ಹುಲಿಮನಿ | ಅಧ್ಯಕ್ಷರು, ಎಸ್‌ಡಿಎಂಸಿ |
| 2 | ಮಾರುತಿ ಭಜಂತ್ರಿ | ಸದಸ್ಯರು, ಎಸ್‌ಡಿಎಂಸಿ |
| 3 | ಮಸ್ತಾನ್‌ಸಾಬ್ ನದಾಫ್ | |
| 4 | ಗಂಗಮ್ಮ ರೇವಡಗಿ | |
| 5 | ಅನ್ನಪೂರ್ಣ ಜಗದಣ್ಣವರ | |

7. ಎರಡರಿಂದ 6ನೇ ಎದುರುದಾರರುಗಳು ಸಲ್ಲಿಸಿದ ದಿ:28/10/2020ರ ಪ್ರತ್ಯೇಕ ಆಕ್ಷೇಪಣೆಗಳಲ್ಲಿ –

ಶಾಲೆಯ ವಿದ್ಯಾರ್ಥಿಗಳಿಗೆ ಶೂ\ ಸಾಕ್ಸ್ ಖರೀದಿಗೆ ಸಂಬಂಧಿಸಿದಂತೆ ಶಾಲಾ ಎಸ್‌ಡಿಎಂಸಿ ಸದಸ್ಯರು ಸಭೆ ಸೇರಿ, ಚರ್ಚಿಸಿ, ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಪ್ರಕಾರ ಒಟ್ಟು ಆರು ಪೂರೈಕೆದಾರರು ಅರ್ಜಿ ಸಲ್ಲಿಸಿದ್ದಾರೆ. ಸದರಿ ಪೂರೈಕೆದಾರರುಗಳ ಕೊಟೇಷನ್ ಅರ್ಜಿಗಳನ್ನು ಪರಿಶೀಲಿಸಿ, ಫುಟ್‌ವೇರ್‌ನ ಡಿಸೈನ್ ಮತ್ತು ಡೆವಲಪ್‌ಮೆಂಟ್ ಇನ್ಸಿಟಿಟ್ಯೂಟ್, ಮಿನಿಸ್ಟ್ರಿ ಆಫ್ ಕಾಮರ್ಸ್ & ಇಂಡಸ್ಟ್ರಿ, ಭಾರತ ಸರ್ಕಾರ ಇವರಿಗೆ ಶೂ ಗಳ ಕ್ವಾಲಿಟಿಯ ಕುರಿತು ಪರೀಕ್ಷೆಗಾಗಿ ಕಳುಹಿಸಿದ್ದು, ಅದರಲ್ಲಿ 'ಶೂ ಜೋನ್' ರವರ ಲೂನಾರ್ ಕಂಪನಿಯ ಶೂಗಳು ಉತ್ತಮ ಅಂತ ಶಿಫಾರಸ್ಸು ಮಾಡಿದ್ದಾರೆ. ಹೀಗಾಗಿ 'ಶೂ ಜೋನ್' ರವರು ಪೂರೈಸಿದ ಶೂ ಮತ್ತು ಸಾಕ್ಸ್‌ಗಳು ಉತ್ತಮ ಎಂದು ಕಂಡು ಬಂದಿದ್ದರಿಂದ, ದಿ:23/09/19ರಂದು ಎಸ್‌ಡಿಎಂಸಿ ಸದಸ್ಯರು, ಅಧ್ಯಕ್ಷರು ಹಾಗೂ ಶಾಲೆಯ ಪ್ರಧಾನ ಗುರುಗಳು ಸೇರಿ 2019–20ನೇ ಸಾಲಿನ ಸ್ಯಾಂಡಲ್ಸ್ \ ಸಾಕ್ಸ್ ಖರೀದಿಗಾಗಿ ಸರ್ವಾನುಮತದಿಂದ ಶಿಕ್ಷಣ ಇಲಾಖೆಯ ಮಾರ್ಗದರ್ಶಿಯಲ್ಲಿನ ಸೂಕ್ತ ಕ್ರಮಗಳನ್ನು ಹಾಗೂ ಗುಣಮಟ್ಟದ ನಿಗಧಿತ ಬ್ರಾಂಡ್ ನೀಡಲು ಠರಾಯಿಸಲಾಯಿತು. ಆ ಪ್ರಕಾರ, 'ಶೂ ಜೋನ್' ರವರಿಗೆ ಶೂ ಮತ್ತು ಸಾಕ್ಸ್‌ಗಳ ಬದಲಾಗಿ ಸ್ಯಾಂಡಲ್ ಮತ್ತು ಸಾಕ್ಸ್‌ಗಳನ್ನು ಪೂರೈಸುವಂತೆ ತಿಳಿಸಿದೆ. ಠರಾವಿನ ಪ್ರತಿ, 'ಶೂ ಜೋನ್' ಮತ್ತು ಇತರೆ ಸಂಸ್ಥೆಗಳು ಸಲ್ಲಿಸಿದ ಕೊಟೇಷನ್ ಪ್ರತಿಗಳು ಹಾಗೂ ಪ್ರಯೋಗಾಲಯದಿಂದ ಬಂದ ವರದಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗಿದ್ದು, ಖರೀದಿಯನ್ನು ನಿಯಮಾನುಸಾರ ಮಾಡಿದೆ. ಈ ಮೊದಲು ಶಾಲೆಗೆ ಪಿರ್ಯಾದುದಾರರದ್ದೇ ಆದ ಆರೂಢ ಎಂಟರ್‌ಪ್ರೈಸಸ್ ದಿಂದ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸುತ್ತಿದ್ದು, ಆ ಸಂಸ್ಥೆಗೆ ಟಿನ್ ನಂಬರ್ ಇರದ ಕಾರಣ ಮತ್ತು ಜಿಎಸ್‌ಟಿ ಬಿಲ್ ಕೊಡದ ಕಾರಣ, ಅವರಿಂದ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿಸುವುದನ್ನು ನಿಲ್ಲಿಸಿದ ಕಾರಣ, ದೂರುದಾರರು ಸುಳ್ಳು ದೂರನ್ನು ಸಲ್ಲಿಸಿದ್ದಾರೆ. ಕಾರಣ, ದೂರನ್ನು ಮುಕ್ತಾಯಗೊಳಿಸಲು ಕೋರಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಆಹೆಟ್ಟಿ, ನವಲಗುಂದ ತಾಲ್ಲೂಕ್ ಇಲ್ಲಿ 2019–20ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಒಂದು ಜೊತೆ ಶೂ\ ಸ್ಯಾಂಡಲ್ ಮತ್ತು ಎರಡು ಜೊತೆ ಸಾಕ್ಸ್ ಖರೀದಿಗೆ ಸಂಬಂಧಿಸಿದಂತೆ, ಈ ಕೆಳಗಿನ ಸಂಸ್ಥೆಗಳು ದರಪಟ್ಟಿಗಳನ್ನು ಸಲ್ಲಿಸಿವೆ –

1. ಶ್ರೀ ಆರೋಡಾ ಎಂಟರ್‌ಪ್ರೈಸಸ್, ನವಲಗುಂದ – ದಿ:16/08/2019
2. ಶೂ ಜೋನ್, ಧಾರವಾಡ, – ದಿ:12/08/2019
3. ವಿಜಯ ಫುಟ್‌ವೇರ್, ಧಾರವಾಡ, – ದಿನಾಂಕ ನಮೂದಿಲ್ಲ
4. ಬಿಜಾಪುರ ಫುಟ್‌ವೇರ್, ಕಿತ್ತೂರು – ದಿ:16/08/2019
5. ಶ್ರೀ ಬಾಲಾಜಿ ಡ್ರೆಸಸ್, ಧಾರವಾಡ – ದಿ:16/08/2019
6. ಸಂಜಯ ಏಜೆನ್ಸಿ, ಹುಬ್ಬಳ್ಳಿ ಮತ್ತು – ದಿ:16/08/2019
7. ಎಸ್‌ವಿಆರ್ ಫುಟ್‌ವೇರ್, ಬೆಳಗಾವಿ – ದಿ:16/08/2019

[ಟಿಪ್ಪಣಿ:– 1ನೇ ಎದುರುದಾರರು ಆಕ್ಷೇಪಣೆಯೊಂದಿಗೆ ಸಲ್ಲಿಸಿರುವ ದರಪಟ್ಟಿಗಳಲ್ಲಿ ದಿನಾಂಕ ನಮೂದಿಸಿಲ್ಲ]

2) ದರಪಟ್ಟಿಗಳ ವಿವರಗಳು ಈ ಕೆಳಗಿನಂತಿವೆ –

*1. ಶ್ರೀ ಆರೋಡಾ ಎಂಟರ್‌ಪ್ರೈಸಸ್, ನವಲಗುಂದ*

| ಕ್ರ. ಸಂ. | ವರ್ಗ | ಮೂರು ಕಂಪನಿಗಳ ಶೂ ಮತ್ತು ಸಾಕ್ಸ್‌ಗಳ ಕೊಟೇಷನ್ ಪ್ರತಿ | | |
|---|---|---|---|---|
| | | ಲಕಾನಿ | ಆಕ್ಷನ್ | ಪಾರಾಗನ್ |
| 1 | 1 – 5 | 250 | 253 | 255 |
| 2 | 6 – 8 | 280 | 283 | 285 |
| 3 | 9 – 10 | 310 | 313 | 315 |

*2. ಶೂ ಜೋನ್, ಸುಭಾಷ್ ರಸ್ತೆ, ಧಾರವಾಡ–*

| ಕ್ರ.ಸಂ. | ವಿವರ | ದರ |
|---|---|---|
| 1 | 1 ರಿಂದ 5ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ –– ಶೂ, 2 ಜೊತೆ ಸಾಕ್ಸ್ (ಶೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 265.00 |
| 2 | 6 ರಿಂದ 8ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ –– ಶೂ, 2 ಜೊತೆ ಸಾಕ್ಸ್ (ಶೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 295.00 |
| 3 | 9 ರಿಂದ 10ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು | 325.00 |

BSM/3226/19



| | | |
|---|---|---|
| | ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | |

ಸೂಚನೆ:- 1. ಶಾಲೆಗಳಿಗೆ ಸಾಮಗ್ರಿಗಳನ್ನು ತಲುಪಿಸಲು ಸಾಗಾಣಿಕೆ ವೆಚ್ಚವಿರುತ್ತದೆ.

3. **ವಿಜಯ ಫುಟ್‌ವೇರ್, ವಿಜಯ ರಸ್ತೆ, ಧಾರವಾಡ** –

| ಕ್ರ.ಸಂ. | ವಿವರ | ದರ |
|---|---|---|
| 1 | 1 ರಿಂದ 5ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 268.00 |
| 2 | 6 ರಿಂದ 8ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 297.00 |
| 3 | 9 ರಿಂದ 10ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 327.00 |

4. **ಬಿಜಾಪುರ ಫುಟ್‌ವೇರ್, ಕಿತ್ತೂರ್** –

| ಕ್ರ.ಸಂ. | ವಿವರ | ದರ |
|---|---|---|
| 1 | 1 ರಿಂದ 5ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 285.00 |
| 2 | 6 ರಿಂದ 8ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 305.00 |
| 3 | 9 ರಿಂದ 10ನೇ ತರಗತಿ ವರೆಗೆ ವಿದ್ಯಾರ್ಥಿಗಳಿಗೆ ಒಂದು ಜೊತೆ --- ಶೂ, 2 ಜೊತೆ ಸಾಕ್ಸ್ (ಷೂ ಪಿ.ಯು ಸೋಲ್ ಹೊಂದಿದ್ದು ಹಾಗೂ ಇನ್‌ಸಾಕ್ ಬಟ್ಟೆ ಫ್ಯಾಬ್ರಿಕ್‌ನಿಂದ ಕೂಡಿರುತ್ತದೆ) | 355.00 |

ಸೂಚನೆ:– 1. ಶಾಲೆಗಳಿಗೆ ಸಾಮಗ್ರಿಗಳನ್ನು ತಲುಪಿಸಲು ಸಾಗಾಣಿಕೆ ವೆಚ್ಚವಿರುತ್ತದೆ.

5. **ಶ್ರೀ ಬಾಲಾಜಿ ಡ್ರೆಸಸ್, ಧಾರವಾಡ** –

| ಕ್ರ.ಸಂ. | ತರಗತಿ | ಸಾಮಗ್ರಿಗಳು | ದರಪಟ್ಟಿ |
|---|---|---|---|
| 1 | 1 ರಿಂದ 5ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳು | 265 |
| 2 | 6 ರಿಂದ 8ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳು | 295 |
| 3 | 9 ರಿಂದ 10ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳು | 325 |

6. **ಸಂಜಯ್ ಏಜೆನ್ಸಿ, ಹುಬ್ಬಳ್ಳಿ** –

| | |
|---|---|
| 1 ರಿಂದ 5ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳು | 274.00 |
| 6 ರಿಂದ 8ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | 304.00 |
| 9 ರಿಂದ 10ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | 345.00 |

7. **ಎಸ್‌ವಿಆರ್ ಫುಟ್‌ವೇರ್, ಬೆಳಗಾವಿ** –

| | |
|---|---|
| 1 ರಿಂದ 5ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳು | 280.00 |
| 6 ರಿಂದ 8ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | 300.00 |
| 9 ರಿಂದ 10ನೇ ತರಗತಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ | 330.00 |

3) '2019–20ನೇ ಷೂ-ಸಾಕ್ಸ್ ಬೇಡಿಕೆ ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ' ಎಂದು ಶಿರೋನಾಮೆ ನಮೂದಿಸಿರುವ ದಿ:25/09/19ರ ಸರಬರಾಜು ಆದೇಶವನ್ನು 1 ಮತ್ತು 2ನೇ ಎದುರುದಾರರುಗಳು ನೀಡಿದ್ದಾರೆ. ಅದರ ವಿವರಗಳು ಈ ಕೆಳಗಿನಂತಿದೆ –

| ಕ್ರ. ಸಂ. | ತರಗತಿ | ಒಟ್ಟು ಬಾಲಕಿಯರು | ಒಟ್ಟು ಬಾಲಕರು | ಒಟ್ಟು |
|---|---|---|---|---|

BGM/3226/19



| | | | | |
|---|---|---|---|---|
| 1 | ಒಂದನೇ | 11 | 19 | 30 |
| 2 | ಎರಡನೇ | 16 | 12 | 28 |
| 3 | ಮೂರನೇ | 07 | 12 | 19 |
| 4 | ನಾಲ್ಕನೇ | 17 | 12 | 29 |
| 5 | ಐದನೇ | 11 | 17 | 28 |
| 6 | ಆರನೇ | 14 | 18 | 32 |
| 7 | ಏಳನೇ | 09 | 13 | 22 |
| 8 | ಎಂಟನೇ | 19 | 18 | 37 |
| 9 | ಒಂಬತ್ತನೇ | – | – | – |
| 10 | ಹತ್ತನೇ | – | – | – |
| **ಒಟ್ಟು ವಿದ್ಯಾರ್ಥಿಗಳು** | | 104 | 121 | 225 |

4) ದಿನಾಂಕ:23/09/2019ರಂದು ನಡೆದ ಎಸ್‌ಡಿಎಂಸಿ ನಡವಳಿ ಈ ಕೆಳಗಿನಂತಿದೆ –

**"ಠರಾವು**

*ದಿನಾಂಕ:23/09/2019ರಂದು SDMC ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಪ್ರಧಾನ ಗುರುಗಳು ಸಭೆ ಸೇರಿ ಸನ್ 2019–20ನೇ ಸಾಲಿನ ಸ್ಯಾಂಡಲ್ಸ್| ಸಾಕ್ಸ್ ಖರೀದಿಗಾಗಿ ಕೆಳಗೆ ನಮೂದಿಸಿದಂತೆ ಸಭೆ ರಚಿಸಲಾಯಿತು. ಈ ಸಮಿತಿಯ ಒಮ್ಮತದ ತೀರ್ಮಾನದಂತೆ, XXXXXXXXXXXXXX*

*ಇವರಿಗೆ ಪೂರೈಸಲು ತಿಳಿಸಲಾಯಿತು.*

*ಇಲಾಖೆಯ ಮಾರ್ಗದರ್ಶಿ ಸೂತ್ರಗಳನ್ನು ಹಾಗೂ ಗುಣಮಟ್ಟದ, ನಿಗಧಿತ ಬ್ರಾಂಡನ್ನು ನೀಡಲು ತಿಳಿಸಲಾಯಿತು.*

*ಸಮಿತಿಯ ವಿವರ*

*1) ಶ್ರೀ.ಮಂಜುನಾಥ ಹುಲಿಮನಿ, ಅಧ್ಯಕ್ಷರು*
*2) ಶ್ರೀ.ಮಾರುತಿ ಭಜಂತ್ರಿ, ಸದಸ್ಯರು*
*3) ಶ್ರೀ.ಮಸ್ತಾನ್ ಸಾಬ್ ನಧಾಫ್, ಸದಸ್ಯರು*
*4) ಶ್ರೀಮತಿ.ಗಂಗಮ್ಮ ರೇವಡಗಿ*
*5) ಶ್ರೀಮತಿ.ಅನ್ನಪೂರ್ಣ ಜಗದನ್ನವರ*
*6) ಶ್ರೀ.ಎಸ್.ಬಿ.ತೇಗೂರ, ಪ್ರಧಾನ ಗುರುಗಳು"*

5) ಮೇಲಿನ ನಡವಳಿಯನ್ವಯ, ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಪೂರೈಸಲು ಯಾವ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿದೆಯೆಂಬ ವಿವರವನ್ನು ನಡವಳಿಯಲ್ಲಿ ನಮೂದಿಸದೇ ಇರುವುದು ಕಂಡು ಬಂದಿದೆ. ಯಾವ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಬೇಕೆಂದು ಎಸ್‌ಡಿಎಂಸಿಯು ತೀರ್ಮಾನ ತೆಗೆದುಕೊಳ್ಳದೇ ಇದ್ದರೂ, 1 ಮತ್ತು 2ನೇ ಎದುರುದಾರರುಗಳು ಕಾರ್ಯಾದೇಶವನ್ನು ನೀಡಿದ್ದಾರೆ;

6) ಷೂ ಜೋನ್, ಧಾರವಾಡ ರವರಿಂದ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಖರೀದಿಸಿದೆಯೆಂದು ಶೂ ಜೋನ್ ಸಂಸ್ಥೆಯ ದಿ:01/10/19ರ ಬಿಲ್ ಸಂಖ್ಯೆ:25ರಲ್ಲಿ ಕಂಡು ಬಂದಿದೆ;

7) ದಿ:25/09/19ರ ಕಾರ್ಯಾದೇಶದಲ್ಲಿ 'ಇವರಿಗೆ' ಮೀಸಲಿರಿಸಿದ ಸ್ಥಳವನ್ನು ಭರ್ತಿ ಮಾಡಿಲ್ಲ. ಕಾರಣ, ಶೂ\ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಪೂರೈಕೆ ಮಾಡಲು ಶೂ ಜೋನ್ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿಲ್ಲವೆಂದು ಹೇಳಬಹುದಾಗಿದೆ;

8) ಮೇಲೆ ಹೇಳಿದ ಬಿಲ್ಲಿನಲ್ಲಿರುವ ವಿವರಗಳು ಈ ಕೆಳಗಿನಂತಿದೆ –

| ವಿವರ | ದರ | ಸಂಖ್ಯೆಗಳು | ಮೊತ್ತ |
|---|---|---|---|
| 1 ರಿಂದ 5ನೇ ತರಗತಿ ವರೆಗೆ ಒಂದು ಜೊತೆ ಸ್ಯಾಂಡಲ್ಸ್, 2 ಜೊತೆ ಸಾಕ್ಸ್ | 265.00 | 134 | 35510.00 |
| 6 ರಿಂದ 8ನೇ ತರಗತಿ ವರೆಗೆ ಒಂದು ಜೊತೆ ಸ್ಯಾಂಡಲ್ಸ್, 2 ಜೊತೆ ಸಾಕ್ಸ್ | 295.00 | 91 | 26840.00 |
| ಒಟ್ಟು | | | 62355.00 |

9) ಒಟ್ಟು ಏಳು ಸಂಸ್ಥೆಗಳು ಸಲ್ಲಿಸಿದ ದರಪಟ್ಟಿಗಳ ಪೈಕಿ ಶೂ ಜೋನ್, ಧಾರವಾಡ ಮತ್ತು ಶ್ರೀ ಬಾಲಾಜಿ ಡ್ರೆಸಸ್, ಧಾರವಾಡ ಸಂಸ್ಥೆಯು ನಮೂದಿಸಿದ ದರಗಳು ಒಂದೇ ಇವೆ. ಶ್ರೀ ಆರೋಡಾ ಎಂಟರ್‌ಪ್ರೈಸಸ್, ನವಲಗುಂದ ರವರು ನಮೂದಿಸಿದ ದರಗಳು ಇತರೆ ಆರು ಸಂಸ್ಥೆಗಳು ನಮೂದಿಸಿದ ದರಗಳಿಗಿಂತ ಕಡಿಮೆಯಾಗಿದೆ ಮತ್ತು ಸದರಿ ದರಪಟ್ಟಿಯಲ್ಲಿ ತಯಾರಕರ ವಿವರಗಳು (Details of Manufacturer) ನಮೂದಾಗಿದೆ. ಉಳಿದ ದರಪಟ್ಟಿಗಳಲ್ಲಿ ತಯಾರಕರ ವಿವರಗಳು ನಮೂದಾಗಿಲ್ಲ;

10) ಶೂ ಜೋನ್, ಧಾರವಾಡ ಸಂಸ್ಥೆಯು ಸಲ್ಲಿಸಿದ ದರಪಟ್ಟಿಯಲ್ಲಿ "ಸಾಗಾಣಿಕೆ ವೆಚ್ಚವನ್ನು" ನೀಡಬೇಕೆಂದು ಹೇಳಿದೆ;

11) ಉಳಿದ ದರಪಟ್ಟಿಗಳಲ್ಲಿ (ಬಿಜಾಪುರ ಫುಟ್‌ವೇರ್ ಹೊರತುಪಡಿಸಿ) 'ಸಾಗಾಣಿಕೆ ವೆಚ್ಚ' ದ ಬಗ್ಗೆ ಹೇಳಿಲ್ಲ;

12) ಶ್ರೀ ಆರೋಡ ಎಂಟರ್‌ಪ್ರೈಸಸ್ ಸಂಸ್ಥೆಯು ಸಲ್ಲಿಸಿದ ದರಪಟ್ಟಿಯಲ್ಲಿ ಟಿನ್ ನಂಬರ್ (ನಂ.29151309381) ನ್ನು ನಮೂದಿಸಿದೆ. ಕಾರಣ, 2 ರಿಂದ 6ನೇ ಎದುರುದಾರರುಗಳು ಹೇಳುವಂತೆ ಶ್ರೀ ಆರೋಡ ಎಂಟರ್‌ಪ್ರೈಸಸ್ ಸಂಸ್ಥೆಗೆ ಟಿನ್ ನಂಬರ್ ಇಲ್ಲ ಎಂಬ ವಾದವನ್ನು ಒಪ್ಪಲು ಅರ್ಹವಲ್ಲ;

13) ಒಟ್ಟು ಏಳು ದರಪಟ್ಟಿಗಳ ಪೈಕಿ ಶ್ರೀ ಆರೋಡ ಎಂಟರ್‌ಪ್ರೈಸಸ್ ಸಂಸ್ಥೆಯು ಸಲ್ಲಿಸಿದ ದರಪಟ್ಟಿಗಳಲ್ಲಿ ಪ್ರತಿಷ್ಠಿತ ಶೂ\ ಸ್ಯಾಂಡಲ್ಸ್ ತಯಾರಕ ಸಂಸ್ಥೆಗಳ (ಲಖಾನಿ, ಆಕ್ಷನ್, ಪಾರಾಗನ್) ಶೂ\ ಸ್ಯಾಂಡಲ್ಸ್‌ಗಳಿಗೆ ಕಡಿಮ ದರವನ್ನು ನಮೂದಿಸಿದ್ದರೂ, ಶೂ ಜೋನ್ ಸಂಸ್ಥೆಯಿಂದ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಖರೀದಿಸಲು ಕಾರಣವೇನೆಂದು ಠರಾವಿನಲ್ಲಿ ನಮೂದಾಗಿಲ್ಲ. ಇಲ್ಲಿ ಉಲ್ಲೇಖಿಸಬೇಕಾದ ಇನ್ನೊಂದು ಅಂಶವೇನೆಂದರೆ, ಮೇಲೆ ಹೇಳಿದಂತೆ ಯಾವ ಸಂಸ್ಥೆಯಿಂದ

BGM/3226/18



ಶೂ\ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಖರೀದಿಸಬೇಕೆಂದು ಠರಾವಿನಲ್ಲಿ ನಮೂದಾಗಿಲ್ಲ. ಠರಾವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, 'ಸಂಸ್ಥೆ' ಯ ಹೆಸರನ್ನು ಮುಂದಿನ ದಿನಾಂಕಗಳಲ್ಲಿ ನಮೂದಿಸಲು ಅನುಕೂಲವಾಗುವಂತೆ ಜಾಗವನ್ನು ಬಿಟ್ಟು ಠರಾವನ್ನು ಬರೆದಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

14) ಶೂ ಜೋನ್, ಧಾರವಾಡ ಸಂಸ್ಥೆಯಿಂದ ಶೂ ಮತ್ತು ಸಾಕ್ಸ್‌ಗಳನ್ನು ಖರೀದಿ ಮಾಡುವ ಬಗ್ಗೆ ಸದರಿ ಸಂಸ್ಥೆಗೆ ಕಾರ್ಯಾದೇಶ ನೀಡುವ ಬಗ್ಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನಡವಳಿ ಇಲ್ಲ;

15) 2019–20ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿ ಶಿಕ್ಷಣ ಇಲಾಖೆ ವತಿಯಿಂದ ನಡೆಸಲ್ಪಡುವ ಸರ್ಕಾರಿ ಶಾಲೆಗಳಲ್ಲಿ 1 ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ\ ವಿದ್ಯಾರ್ಥಿನಿಯರಿಗೆ ಉಚಿತವಾಗಿ ಒಂದು ಜೊತೆ ಶೂ ಮತ್ತು ಎರಡು ಜೊತೆ ಸಾಕ್ಸ್‌ಗಳನ್ನು ವಿತರಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ.134.ಯೋಯೋಕ.2018 ಬೆಂಗಳೂರು ದಿ:06/05/2019ನ್ನು ಅನುಸರಿಸಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಸುತ್ತೋಲೆ ಸಂಖ್ಯೆ:ಸಿಪಿಇ(1)\ಪಾದರಕ್ಷೆ (ಷೂ)–06\18–19 ದಿ:21/06/2019ನ್ನು ಹೊರಡಿಸಿದ್ದಾರೆ. ಸದರಿ ಸುತ್ತೋಲೆಯಲ್ಲಿನ ಷರತ್ತುಗಳು ಈ ಕೆಳಗಿನಂತಿದೆ–

*"ಷರತ್ತುಗಳು:–*

1. *ಅರ್ಹ ವಿದ್ಯಾರ್ಥಿಗಳ ಪಾದರಕ್ಷೆಗಳ ಅಳತೆ ದಾಖಲಿಸಿ ಉತ್ತಮ ಗುಣಮಟ್ಟದ ಪಾದರಕ್ಷೆಗಳನ್ನು ಸ್ಥಳೀಯವಾಗಿ ಖರೀದಿಸಿ ವಿತರಣೆ ಮಾಡುವ ಜವಾಬ್ದಾರಿಯನ್ನು ಸಂಬಂಧಿಸಿದ ಶಾಲೆಯ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ (ಎಸ್‌ಡಿಎಂಸಿ) ಗಳಿಗೆ ವಹಿಸಲಾಗಿದೆ.*

2. *ಒಂದು ಜೊತೆ ಕಪ್ಪು ಬಣ್ಣದ ಷೂ ಹಾಗೂ ಎರಡು ಜೊತೆ ಬಿಳಿ ಬಣ್ಣದ ಕಾಲು ಚೀಲ (ಸಾಕ್ಸ್) ಗಳನ್ನು ಖರೀದಿಸಿ ವಿತರಿಸುವುದು. ಷೂ ಹಾಗೂ ಕಾಲುಚೀಲಗಳನ್ನು ಖರೀದಿಸುವ ಮುನ್ನ ರಾಜ್ಯದಲ್ಲಿನ ವಿವಿಧ ಭಾಗಗಳಲ್ಲಿ ಆಯಾ ಭಾಗದ ಪರಿಸರಕ್ಕೆ ಹೊಂದಿಕೆಯಾಗುವಂತಹ ಅಂದರೆ ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲಿ ವರ್ಷದಲ್ಲಿ ಮೂರರಿಂದ ನಾಲ್ಕು ತಿಂಗಳು ಅತೀ ಹೆಚ್ಚು ಮಳೆ ಬೀಳುವುದರಿಂದ ವಿದ್ಯಾರ್ಥಿಗಳಿಗೆ ಷೂಗಳು ಸಮರ್ಪಕ ಪಾದರಕ್ಷೆ ಎನಿಸದಿದ್ದಲ್ಲಿ, ಅದೇ ರೀತಿ ಉತ್ತರ ಕರ್ನಾಟಕ ಭಾಗದಲ್ಲಿ ಅತೀ ಹೆಚ್ಚು ಉಷ್ಣಾಂಶದ ವಾತಾವರಣ ಇರುವುದರಿಂದ ಷೂ ಅಷ್ಟೊಂದು ಸಮಂಜಸ ಎನಿಸದಿದ್ದಲ್ಲಿ, ಹಾಗೂ ಇಂತಹ ವಾತಾವರಣ ವೈಪರೀತ್ಯದ ಇತರೆ ಪ್ರದೇಶದಲ್ಲಿ ವಾತಾವರಣದ ಸ್ಥಿತಿಗತಿಗಳನ್ನು ಅನುಸರಿಸಿ ಹಾಗೂ ಧರಿಸಲು ಮತ್ತು ತೆಗೆಯಲು ಸುಲಭವಾಗುವಂತಹ ಸ್ಯಾಂಡಲ್‌ಗಳನ್ನು ಧರಿಸಬಹುದೆಂಬ ಅಭಿಪ್ರಾಯವಿದ್ದರೆ, ಇಂತಹ ಪ್ರದೇಶದಲ್ಲಿ ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್‌ಗಳ ಆಯ್ಕೆಯನ್ನು ಆಯಾ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ತೀರ್ಮಾನಕ್ಕೆ ಬಿಡಲಾಗಿದೆ.*

3. ಷೂ ಮತ್ತು ಸಾಕ್ಸ್ ಅಥವಾ ಸ್ಯಾಂಡಲ್ಸ್‌ಗಳನ್ನು ಖರೀದಿಸುವಾಗ ಉತ್ತಮ ಗುಣಮಟ್ಟದ ಪಾದರಕ್ಷೆಗಳನ್ನು ಸ್ಥಳೀಯವಾಗಿ ಖರೀದಿಸಿ ವಿತರಣೆ ಮಾಡುವ ಸಲುವಾಗಿ ಉತ್ತಮ ಗುಣಮಟ್ಟವನ್ನು ಕಾಯ್ದಿರಿಸಲು ಎಫ್‌ಡಿಡಿಐ (ನೋಯಿಡಾ) ರವರು ನೀಡಿರುವ ತಾಂತ್ರಿಕ ಗುಣಮಟ್ಟವನ್ನು ಅನುಸರಿಸಲು ಸೂಚಿಸಿದೆ. ಸದರಿ ತಾಂತ್ರಿಕ ಗುಣಮಟ್ಟವನ್ನು ತೋರಿಸುವ ಪಟ್ಟಿಯನ್ನು ಈ ಪತ್ರದೊಂದಿಗೆ ಅನುಬಂಧಿಸಿದೆ.

4. ಈ ಸಂಬಂಧ ಖರೀದಿ ಪ್ರಕ್ರಿಯೆ ಮುಗಿದ ನಂತರ ಶಾಲೆಗಳಲ್ಲಿ ಗುಣಮಟ್ಟದ ಯಾದೃಚ್ಛಿಕ (Random) ಪರಿಶೀಲನೆಗಾಗಿ ಪ್ರತಿ ತಾಲ್ಲೂಕಿನಲ್ಲಿ ಒಂದು ಸಮಿತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರಚಿಸಬೇಕು. ಈ ಸಮಿತಿಯು ಶೇ.5ರಷ್ಟು ಶಾಲೆಗಳಲ್ಲಿ ಗುಣಮಟ್ಟ ಪರಿಶೀಲಿಸಬೇಕು.

5. ಷೂ ಮತ್ತು ಸಾಕ್ಸ್‌ಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸುವ ಮುನ್ನ ಎಸ್‌ಡಿಎಂಸಿ ಯು ಕೆಳಕಂಡಂತೆ ಒಂದು ಅನುಮೋದಿತ ಸಮಿತಿಯನ್ನು ರಚಿಸಿ ಖರೀದಿ ಪ್ರಕ್ರಿಯೆ ಪ್ರಾರಂಭಿಸುವುದು.

<u>ಪಾದರಕ್ಷೆ ಖರೀದಿ ಸಮಿತಿ</u>

| ಸಮಿತಿ | | |
|---|---|---|
| 1 | ಎಸ್‌ಡಿಎಂಸಿ ಅಧ್ಯಕ್ಷರು | ಸಮಿತಿ ಅಧ್ಯಕ್ಷರು |
| 2 | ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು | ಸದಸ್ಯ ಕಾರ್ಯದರ್ಶಿ |
| 3 | ಎಸ್‌ಡಿಎಂಸಿ ನಾಮ ನಿರ್ದೇಶಿತ ಮೂವರು ಸದಸ್ಯರು, ಇದರಲ್ಲಿ ಕಡ್ಡಾಯವಾಗಿ ಇಬ್ಬರು ಮಹಿಳಾ ಸದಸ್ಯರು ಇರಬೇಕು | ಸದಸ್ಯರುಗಳು |

(ಮೂವರು ಸದಸ್ಯರನ್ನು ಆಯ್ಕೆ ಮಾಡಲು ಪ್ರತಿ ಎಸ್‌ಡಿಎಂಸಿ ಯು ಈ ಬಗ್ಗೆ ಸಭೆ ನಡೆಸಲು ನಿರ್ದೇಶಿಸಲಾಗಿದ್ದು, ಎಸ್‌ಡಿಎಂಸಿ ಸಮಿತಿಯ ಸಭೆಯಲ್ಲಿ ಕನಿಷ್ಟ ಸಮಿತಿಯ ಅರ್ಧದಷ್ಟು ಸದಸ್ಯರು ಹಾಜರಿರತಕ್ಕದ್ದು. ಸಭೆಯ ನಡವಳಿಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು).

6. ಷೂ ಮತ್ತು ಸಾಕ್ಸ್ ಖರೀದಿ ಪ್ರಕ್ರಿಯೆ ಪ್ರಾರಂಭಿಸುವ ಮುನ್ನ ಎಸ್‌ಡಿಎಂಸಿ ಯು ಅನುಮೋದಿತ ಸಮಿತಿಯನ್ನು ರಚಿಸಿ ಖರೀದಿ ಪ್ರಕ್ರಿಯೆ ಪ್ರಾರಂಭಿಸುವುದು. ಒಂದು ವೇಳೆ ಸಂಬಂಧಿಸಿದ ಶಾಲಾ ಎಸ್‌ಡಿಎಂಸಿ ಕಾರ್ಯನಿರ್ವಹಿಸದಿದ್ದಲ್ಲಿ/ ರಚನೆಯಾಗದಿದ್ದಲ್ಲಿ ತಮ್ಮ ವ್ಯಾಪ್ತಿಯ ಸಕ್ಷಮ ಪ್ರಾಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದು ಷೂ ಮತ್ತು ಸಾಕ್ಸ್ ಖರೀದಿಯನ್ನು ವಿಳಂಬಕ್ಕೆ ಅವಕಾಶ ನೀಡದೇ ನಿಯಮಾನುಸಾರ ಕ್ರಮ ವಹಿಸತಕ್ಕದ್ದು.

7. ಪಾದರಕ್ಷೆಗಳನ್ನು ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯನ್ನು ಗಣನೆಗೆ ತೆಗೆದುಕೊಂಡು ಅದಕ್ಕೆ ತಕ್ಕಂತೆ ಖರೀದಿಸುವುದು, ಹೆಚ್ಚುವರಿ ಅಥವಾ ಕೊರತೆ ಆಗದಂತೆ ಎಚ್ಚರ ವಹಿಸುವುದು.

8. *2019–20ನೇ ಸಾಲಿನ ಈ ಯೋಜನೆಯ ಅನುಷ್ಠಾನಕ್ಕೆ ಆಯಾ ಶಾಲೆಯಲ್ಲಿನ ತರಗತಿವಾರು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸಂಬಂಧಿಸಿದ ಎಸ್‌ಡಿಎಂಸಿ ಗಳಿಗೆ ಕೆಳಕಂಡ ದರದಲ್ಲಿ ಜುಲೈ ಮೊದಲನೆ ವಾರದಲ್ಲಿ K-2 BMS (Beneficiary Management System) ಮೂಲಕ ಅನುದಾನ ಬಿಡುಗಡೆ ಮಾಡಲಾಗುವುದು. ಈಗಾಗಲೇ ಶಾಲೆಗಳು ಪ್ರಾರಂಭವಾಗಿರುವ ಹಿನ್ನೆಲೆಯಲ್ಲಿ ಕೂಡಲೇ ಮಕ್ಕಳ ಪಾದರಕ್ಷೆ ಅಳತೆ ತೆಗೆದುಕೊಂಡು ಅಳತೆಗನುಗುಣವಾಗಿ ಜುಲೈ 15 ಗರಿಷ್ಠ ಜುಲೈ 30ರ ಒಳಗಾಗಿ ಖರೀದಿ ಪ್ರಕ್ರಿಯೆ ಪೂರ್ಣಗೊಳಿಸತಕ್ಕದ್ದು.*

   *ಅ) 1 ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ :ತಲಾ ₹265/–*

   *ಆ) 6 ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ :ತಲಾ ₹295/–*

   *ಇ) 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ :ತಲಾ ₹325/–*

   *ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸೇವಾ ದೃಷ್ಟಿಯಿಂದ ದಾನಿಗಳು, ಖಾಸಗೀ ಸಂಘ ಸಂಸ್ಥೆಗಳು ಹೆಚ್ಚುವರಿ ಧನ ಸಹಾಯ ಮಾಡಿದಲ್ಲಿ ಅದನ್ನೂ ಬಳಸಿಕೊಂಡು ಇನ್ನೂ ಉತ್ತಮ ಗುಣಮಟ್ಟದ ಷೂ ಮತ್ತು ಸಾಕ್ಸ್‌ಗಳನ್ನು ಖರೀದಿಸುವುದು.*

9. ***ಖರೀದಿ ಪ್ರಕ್ರಿಯೆಯಲ್ಲಿ ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗಾಗಲಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಿಗಾಗಲಿ, ಬಿಆರ್‌ಪಿ ಮತ್ತು ಸಿಆರ್‌ಪಿ ಗಳಿಗಾಗಲಿ ಯಾವುದೇ ಅಧಿಕಾರವನ್ನು ನೀಡಿಲ್ಲ. ಈ ವಿಚಾರದಲ್ಲಿ ಅಂದರೆ ಸರ್ಕಾರದ ಯೋಜನೆಯಾದ ಶಾಲಾ ಮಕ್ಕಳಿಗೆ ಸರ್ಕಾರದ ಬಜೆಟ್‌ನಿಂದ ಬಿಡುಗಡೆಯಾದ ಹಣದಲ್ಲಿ ಉಚಿತ ಷೂ ಮತ್ತು ಸಾಕ್ಸ್ ಖರೀದಿಯಲ್ಲಿ ಯಾವುದೇ ಜಿಲ್ಲಾ ಉಪ ನಿರ್ದೇಶಕರಾಗಲಿ, ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಲಿ, ಬಿಆರ್‌ಪಿ ಮತ್ತು ಸಿಆರ್‌ಪಿ ಗಳಾಗಲಿ ಹಸ್ತಕ್ಷೇಪ ಮಾಡದಂತೆ ಈ ಮೂಲಕ ಎಚ್ಚರಿಕೆ ನೀಡಲಾಗಿದೆ.***

10. ***ಒಂದು ವೇಳೆ ಯಾರಾದರೂ ಅಧಿಕಾರಿಗಳು ಹಸ್ತಕ್ಷೇಪ ನಡೆಸಿರುವ ಬಗ್ಗೆ ದೂರುಗಳು ಬಂದಲ್ಲಿ, ಅಂತಹ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ. ಅಲ್ಲದೆ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.***

11. *ಹೆಚ್ಚಿನ ಶಾಲೆಗಳಲ್ಲಿ ಖರೀದಿ ವೆಚ್ಚವು ಒಂದು ಲಕ್ಷಕ್ಕಿಂತ ಕಡಿಮೆ ಆಗುವುದರಿಂದ ಅಂತಹ ಶಾಲೆಗಳು ಮೂರು ಸಂಸ್ಥೆಗಳಿಂದ ಕೊಟೇಷನ್ ಪಡೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಪ್ರಕಾರವಾಗಿ (ಕೆಟಿಟಿಪಿ ಆಕ್ಟ್ 1999) ಖರೀದಿ ಪ್ರಕ್ರಿಯೆಯನ್ನು ನಿರ್ವಹಿಸುವುದು. ಖರೀದಿ ವೆಚ್ಚವು ಒಂದು ಲಕ್ಷವನ್ನು ಮೀರುವಂತಹ ಶಾಲೆಗಳಿಗೆ ಸರ್ಕಾರದಿಂದ ಅನುಮತಿ ಪಡೆದು ಕೆಟಿಟಿಪಿ 4ಜಿ ಅಡಿ ಟೆಂಡರ್ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗುವುದು. ಅವರು ಸಹ ಮೇಲಿನಂತೆ ಕೊಟೇಷನ್ ಮೂಲಕ ಖರೀದಿ ಪ್ರಕ್ರಿಯೆಯನ್ನು ನಿರ್ವಹಿಸುವುದು.* ***ಖರೀದಿ ಮಾಡುವಂತಹ ಸಂಸ್ಥೆಯು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ನೋಂದಣಿಯಾಗಿರಬೇಕು ಮತ್ತು ಜಿಎಸ್‌ಟಿ ಸಂಖ್ಯೆ ಹೊಂದಿರಬೇಕು.***

12. ಪ್ರತಿ ಶಾಲೆಯೂ ಪ್ರತ್ಯೇಕವಾಗಿ ಖರೀದಿ ಮಾಡತಕ್ಕದ್ದು, ಯಾವುದೇ ಕಾರಣಕ್ಕೂ ಒಂದಕ್ಕಿಂತ ಹೆಚ್ಚು ಶಾಲೆಗಳಾಗಲೀ ಅಥವಾ ಬ್ಲಾಕ್ ಮಟ್ಟದಲ್ಲಿ ಯಾವುದೇ ಕೇಂದ್ರೀಕೃತ ಮಾದರಿಯಲ್ಲಿ ಖರೀದಿ ಪ್ರಕ್ರಿಯೆ ಕೈಗೊಳ್ಳುವುದನ್ನು ನಿಷೇಧಿಸಲಾಗಿದೆ.

13. ಉಚಿತ ಶೂ ಮತ್ತು ಸಾಕ್ಸ್ ವಿತರಣೆಗೆ ಸಂಬಂಧಿಸಿದಂತೆ ಒಂದು ವೆಬ್‌ಸೈಟ್ ಮಾಡಲಾಗುವುದು. ಖರೀದಿ ಪ್ರಕ್ರಿಯೆ ಮುಗಿದ ನಂತರ ವೆಬ್‌ಸೈಟ್‌ನಲ್ಲಿ, ಎಲ್ಲಾ ಶಾಲೆಗಳ ಖರೀದಿ ಪ್ರಕ್ರಿಯೆ ಬಗ್ಗೆ ಈ ಕೆಳಕಂಡ ಮಾಹಿತಿಯನ್ನು ಬಿಆರ್‌ಪಿ ಮತ್ತು ಸಿಆರ್‌ಪಿ ಗಳು ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಇದನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಹಂತದಲ್ಲಿ ಪರಿಶೀಲಿಸಿ, ಜಿಲ್ಲಾ ಹಂತಕ್ಕೆ ವರದಿ ಮಾಡುವುದು ಹಾಗೂ ಜಿಲ್ಲಾ ಉಪ ನಿರ್ದೇಶಕರುಗಳು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ವರದಿ ಮಾಡುವುದು.

    1. ಖರೀದಿ ಮಾಡಿದ (ಡೀಲರ್) ಸಂಖ್ಯೆಯ ಜಿಎಸ್‌ಟಿ ಸಂಖ್ಯೆ
    2. ಖರೀದಿ ಮಾಡಿದ (ಡೀಲರ್) ಸಂಸ್ಥೆಯ ವಿವರ
    3. ಖರೀದಿಸಲು ಪಡೆದ ಮೂರು ಕೊಟೇಷನ್ ಪ್ರತಿಗಳು
    4. ಖರೀದಿ ಮಾಡಿದ ಒಟ್ಟು ಪ್ರಮಾಣ
    5. ಒಂದು ಜೊತೆ ಪಾದರಕ್ಷೆಗೆ ತಗಲುವ ವೆಚ್ಚ ಹಾಗೂ ಖರೀದಿಯ ಒಟ್ಟು ಮೌಲ್ಯ
    6. ಪಾವತಿ ಆದೇಶದ ಅನುಮೋದನೆಯನ್ನು ತಂತ್ರಾಂಶದ ಮೂಲಕವೇ ಮಾಡತಕ್ಕದ್ದು.

14. ಶೂಗಳ ಮೇಲ್ಪದರು ಪಾಲಿವಿನೈಲ್ (ಪಿ.ವಿ.ಸಿ) ಕೋಟೆಡ್ ವಿಸ್ಕೋಸ್ | ಪಾಲಿಸ್ಟರ್ | ಪಾಲಿಸ್ಟರ್ ಕಾಟನ್ ಫ್ಯಾಬ್ರಿಕ್ 1.5 ಎಂಎಂ ಹೊಂದಿದ ಮತ್ತು ಎಕ್ಸ್‌ಪೆನ್‌ಡೆಡ್ ಪಾಲಿವಿನೈಲ್ ಕ್ಲೋರೈಡ್ (ಪಿ.ವಿ.ಸಿ) ಸೋಲ್ ಹೊಂದಿದ ಹಾಗೂ ಪಾದರಕ್ಷೆಯ ಒಳಪದರು [Insock] ಬಟ್ಟೆ| ಫ್ಯಾಬ್ರಿಕ್ ನಿಂದ ಕೂಡಿರುವ [ಅಂದಾಜು 0.8ಎಂಎಂ ದಪ್ಪ] ಶೂ ಗಳನ್ನು ಖರೀದಿಸುವುದು. ಎಸ್‌ಡಿಎಂಸಿ ಗಳು ಸ್ಯಾಂಡಲ್ಸ್‌ಗಳನ್ನು ಖರೀದಿಸಲು ಪರಿಗಣಿಸಿದ್ದಲ್ಲಿ ವೆಲ್‌ಕ್ರೋ ಸ್ಯಾಂಡಲ್ಸ್‌ಗಳು [Velcro sandals] ಮತ್ತು 3-ಲೈನಿಂಗ್ ಸಾಕ್ಸ್ ಖರೀದಿಸಿ ವಿತರಿಸುವುದು. ಶೂ, ಸಾಕ್ಸ್ ಮತ್ತು ಸ್ಯಾಂಡಲ್ಸ್ ವೈಶಿಷ್ಟ್ಯತೆಯ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

15. ಹಿಂದಿನ ಸಾಲಿನ ಕೆಲವು ಶಾಲೆಗಳಲ್ಲಿ ಕಳಪೆ ಗುಣಮಟ್ಟದ ಮತ್ತು ನಕಲಿ ಬ್ರಾಂಡೆಡ್ ಶೂ-ಸಾಕ್ಸ್ ಸರಬರಾಜಾಗಿರುವ ಬಗ್ಗೆ ಸರ್ಕಾರದ ಹಂತದಲ್ಲಿ ಸಾಕಷ್ಟು ದೂರುಗಳು ಸ್ವೀಕೃತವಾಗಿರುತ್ತವೆ. ಆದ್ದರಿಂದ ಪ್ರಸ್ತುತ ಸಾಲಿನಲ್ಲಿ ಜಾಗರೂಕತೆಯಿಂದ ಪರಿಶೀಲಿಸಿ ರಾಷ್ಟ್ರಮಟ್ಟದ ಹೆಸರಾಂತ ಕಂಪನಿಗಳ ಪ್ರತಿಷ್ಠಿತ ಬ್ರಾಂಡ್‌ಗಳ [ಬಾಟಾ, ಲಿಬರ್ಟಿ, ಲ್ಯಾನ್ಸರ್, ಪ್ಯಾರಗಾನ್, ಕರೋನ, ಆಕ್ಷನ್, ಲಕಾನಿ, ವಿಕೆಸಿ, ಲೂನಾರ್ಸ್, ಲ್ಯಾನ್ಸರ್-ಡೇಸ್] ಅಧಿಕೃತ ಮಾರಾಟಗಾರರಿಂದ ಶೂ-ಸಾಕ್ಸ್‌ಗಳನ್ನು ಖರೀದಿಸತಕ್ಕದು. ಅನಧಿಕೃತ ಮಾರಾಟಗಾರರಿಂದ ನಕಲಿ ಬ್ಯಾಂಡಡ್, ಕಳಪೆ ಗುಣಮಟ್ಟದ ಶೂ-ಸಾಕ್ಸ್

BSM/3226/13



*ಖರೀದಿಸಿರುವ ಬಗ್ಗೆ ದೂರುಗಳು ವರದಿಯಾದಲ್ಲಿ ತಪಾಸಣೆಗೊಳಿಸಿ ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು/ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪ ನಿರ್ದೇಶಕರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು.*

*16. ಮೇಲ್ಕಂಡ ಕ್ರಮ ಸಂಖ್ಯೆ-14ರಲ್ಲಿ ಪ್ರಸ್ತಾಪಿಸಿರುವ ಕಂಪನಿ/ ಸಂಸ್ಥೆಗಳಿಂದ ಖರೀದಿ ಮಾಡುವ ಶೂ-ಸಾಕ್ಸ್‌ಗಳು ಮೊದಲ ಗುಣಮಟ್ಟ [FIRST QUALITY] ದಿಂದ ಕೂಡಿರುವ ಷೂ ಸಾಕ್ಸ್‌ಗಳನ್ನೆ ಕಡ್ಡಾಯವಾಗಿ ಖರೀದಿಸತಕ್ಕದ್ದು.*

*17. ನಿಯಮಾನುಸಾರ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಖರೀದಿ ಬಳಿಕ ಪ್ರಮಾಣ ಪತ್ರವನ್ನು ಮತ್ತು ಖರೀದಿ ಸ್ವೀಕೃತಿಗಳನ್ನು ಸಂಬಂಧಿತ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಒದಗಿಸುವುದು ಮತ್ತು ಈ ವೆಚ್ಚಗಳನ್ನು ಆಡಿಟ್‌ಗೆ ಒಳಪಡಿಸುವುದು.*

*18. ಉತ್ತಮ ಗುಣಮಟ್ಟದ ಶೂ ಮತ್ತು ಸಾಕ್ಸ್‌ಗಳನ್ನು ಸಕಾಲದಲ್ಲಿ ಅಂದರೆ ಜುಲೈ-15 ಗರಿಷ್ಠ ಜುಲೈ-30ರೊಳಗೆ ವಿತರಣೆಯಾಗುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಉಪ ನಿರ್ದೇಶಕರುಗಳು ನಿಗಾವಹಿಸಿ ಸೂಕ್ತ ಮೇಲ್ವಿಚಾರಣೆ ಮಾಡುವುದು.*

*19. ತಾಲ್ಲೂಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಅನುದಾನವನ್ನು ಸರಿದೂಗಿಸಿಕೊಂಡು ಅಂದರೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಶಾಲೆಗಳಿಂದ ಉಳಿಕೆಯಾಗುವ ಅನುದಾನವನ್ನು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಶಾಲೆಗಳಿಗೆ ಹೊಂದಾಣಿಕೆ ಮಾಡಿಕೊಂಡು ಅಂತಿಮವಾಗಿ ಉಳಿಕೆಯಾಗುವ ಅನುದಾನವನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ಚೆಕ್ ಮುಖಾಂತರ ಪಾವತಿಸುವುದು. ಅದೇ ರೀತಿ ಅನುದಾನ ಕೊರತೆಯಾದಲ್ಲಿ ಜಿಲಾ ಉಪ ನಿರ್ದೇಶಕರಿಗೆ ವರದಿ ಮಾಡತಕ್ಕದ್ದು.*

*20. ಅದೇ ರೀತಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು ವಿದ್ಯಾರ್ಥಿಗಳ ಮಾಹಿತಿಯನ್ನು ಮತ್ತು ಉಳಿಕೆ/ ಕೊರತೆಯಾಗುವ ಅನುದಾನವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದು ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ಕೊರತೆಯಾಗುವ ತಾಲ್ಲೂಕಿಗೆ ಹೊಂದಾಣಿಕೆ ಮಾಡಿ ಅಂತಿವಾಗಿ ಉಳಿಯುವ ಕೊರತೆ / ಉಳಿಯುವ ಅನುದಾನವನ್ನು Account Holder Name:- CPI, AC.No:- 54034600713, IFSC CODE:- SBIN0040526 ಈ ಶಾಖೆಗೆ RTGS/NEFT ಮಾಡುವುದು"*

16) ಶೂ ಜೋನ್ ಸಂಸ್ಥೆಯು ಪೂರೈಕೆ ಮಾಡಿದ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳು ಮೇಲೆ ಹೇಳಿದ ಸುತ್ತೋಲೆಯ ಅಂಶ-14 ರಿಂದ 16ರಲ್ಲಿ ನಿಗಧಿಪಡಿಸಿದ ವೈಶಿಷ್ಟತೆಗಳಿಗನುಗುಣವಾಗಿ ಇತ್ತೇ \ ಇದೆಯೇ ಎಂಬ ಬಗ್ಗೆ ದಾಖಲೆಗಳಿಲ್ಲ;

17) ಶೂ ಜೋನ್ ಸಂಸ್ಥೆಯು ಯಾವ ಕಂಪನಿಯ ಸ್ಯಾಂಡಲ್ಸ್ \ ಸಾಕ್ಸ್‌ಗಳು ಸರಬರಾಜು ಮಾಡಿದೆಯೆಂಬ ಬಗ್ಗೆ ದಾಖಲೆಗಳಿಲ್ಲ;

18) SATRA Accredited Laboratory ಸಂಸ್ಥೆಯ Test Certificate ಲಭ್ಯವಿದ್ದು, ಸದರಿ ಪ್ರಮಾಣ ಪತ್ರವು LUNAR Exports Pvt. Ltd.,ನ ಪೂರೈಕೆದಾರರು (Supplier) ತಯಾರಿಸಿದ ಶಾಲಾ ಶೂ ಗಳಿಗೆ ಸಂಬಂಧಿಸಿದ್ದಾಗಿದೆ. ಸದರಿ ದೂರಿನಲ್ಲಿ ಯಾವ ಕಂಪನಿಯು ತಯಾರಿಸಿದ ಸ್ಯಾಂಡಲ್ಸ್‌ಗಳನ್ನು ಶೂ ಜೋನ್, ಧಾರವಾಡ ಸಂಸ್ಥೆಯು ಪೂರೈಕೆ ಮಾಡಿದೆಯೆಂಬ ಬಗ್ಗೆ ದಾಖಲೆಗಳಿಲ್ಲ. ಈ ಬಗ್ಗೆ ಬಿಲ್ಲಿನಲ್ಲಾಗಲೀ, ಎಸ್‌ಡಿಎಂಸಿ ನಡವಳಿಯಲ್ಲಾಗಲೀ ಯಾವುದೇ ಉಲ್ಲೇಖವಿಲ್ಲ;

19) ಸುತ್ತೋಲೆಯ ಅನುಬಂಧದಲ್ಲಿ ಹೇಳಲಾದ ಷೂ\ ಸ್ಯಾಂಡಲ್ಸ್ \ ಸಾಕ್ಸ್ ಗಳ ತಾಂತ್ರಿಕ ವಿವರಣೆ [Technical Specification] ಅನ್ವಯ ಸದರಿ ಸ್ಯಾಂಡಲ್ಸ್ \ ಸಾಕ್ಸ್ ಗಳು ಗುಣಮಟ್ಟ ಹೊಂದಿರುವ ಬಗ್ಗೆ ದಾಖಲೆಗಳಿಲ್ಲ. ಸುತ್ತೋಲೆಯ ಷರತ್ತಿನ ಕ್ರಮ ಸಂಖ್ಯೆ:3ರಲ್ಲಿ ಸೂಚಿಸಿದಂತೆ ಖರೀದಿಸಿದ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳು ಎಫ್‌ಡಿಡಿಐ (ನೋಯಿಡಾ) ರವರು ಪ್ರಮಾಣೀಕರಿಸಿರುವ ತಾಂತ್ರಿಕ ಗುಣಮಟ್ಟ ಹೊಂದಿದೆಯೇ ಎಂಬ ಬಗ್ಗೆ ದಾಖಲೆಗಳಿಲ್ಲ;

20) ಶೂ ಜೋನ್ ಸಂಸ್ಥೆಯು ಸುತ್ತೋಲೆಯ ಅಂಶ-15ರಲ್ಲಿ ಹೇಳಿದ ಪ್ರತಿಷ್ಠಿತ ಬ್ರಾಂಡ್‌ಗಳ (ಬಾಟಾ, ಲಿಬರ್ಟಿ, ಲ್ಯಾನ್ಸರ್, ಪಾರಾಗನ್, ಕರೋನ, ಆಕ್ಷನ್, ಲಖಾನಿ, ವಿಕೆಸಿ, ಲೂನಾರ್ಸ್, ಲ್ಯಾನ್ಸರ್-ಡೇಸ್) ಅಧಿಕೃತ ಮಾರಾಟಗಾರರು ಎಂಬ ಬಗ್ಗೆ ದಾಖಲೆಗಳಿಲ್ಲ;

21) 2019-20ನೇ ಶೈಕ್ಷಣಿಕ ಸಾಲಿಗೆ ಸ್ಯಾಂಡಲ್ಸ್ ಮತ್ತು ಸಾಕ್ಸ್‌ಗಳನ್ನು ಖರೀದಿಸಬೇಕಾಗಿದ್ದು, ಸುತ್ತೋಲೆಯ ಅಂಶ-8ರನ್ವಯ ಖರೀದಿ ಪ್ರಕ್ರಿಯೆಯು ಜುಲೈ, 15 ರಿಂದ ಜುಲೈ, 30 ರೊಳಗಾಗಿ ಪೂರ್ಣಗೊಳಿಸಬೇಕು. ಸದರಿ ದೂರಿನಲ್ಲಿ ಎದುರುದಾರರುಗಳು ಖರೀದಿ ಪ್ರಕ್ರಿಯೆಯನ್ನು ಸೆಪ್ಟೆಂಬರ್, 2019ರಲ್ಲಿ ಪ್ರಾರಂಭಿಸಿದ್ದಾರೆಂದು ಎಸ್‌ಡಿಎಂಸಿ ನಡವಳಿಯಲ್ಲಿ ಕಂಡು ಬಂದಿದೆ;

22) ಶೂ ಜೋನ್ ಸಂಸ್ಥೆಗೆ ನೀಡಿದ ಬಿಲ್ಲಿನ ಮೊತ್ತದ ಮೇಲೆ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆಯನ್ನು ಕಟಾವಣೆ ಮಾಡಿಲ್ಲ;

23) ಕಾರಣ, ಸದರಿ ಖರೀದಿ ಪ್ರಕ್ರಿಯೆಯಲ್ಲಿ ಮೇಲೆ ಹೇಳಿದ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲನೆ ಮಾಡದೇ ಇರುವುದು ಹಾಗೂ ಗುಣಮಟ್ಟವಲ್ಲದ ಸ್ಯಾಂಡಲ್ಸ್ \ ಸಾಕ್ಸ್‌ಗಳನ್ನು ಖರೀದಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

24) 1ನೇ ಎದುರುದಾರರು ಶಾಲಾ ಮುಖ್ಯೋಪಾಧ್ಯಾಯರಾಗಿದ್ದು, ಸದರಿಯವರು ಸರ್ಕಾರಿ ನೌಕರರಾಗಿ ಪರಿಪೂರ್ಣ ನಿಷ್ಠೆ, ಕರ್ತವ್ಯ ಪರತೆಯನ್ನು ತೋರದೇ ಸರ್ಕಾರಿ ನೌಕರರಿಗೆ ತರವಲ್ಲದ ರೀತಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ;

25) ಕರ್ನಾಟಕ ಗ್ರಾಮ ಪಂಚಾಯಿತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ನಿಯಮ 22 ರಲ್ಲಿ "ಶಾಲೆಯ ಲಾಭ ಮತ್ತು ಆಸ್ತಿಯ ಯಾವುದೇ ಭಾಗವನ್ನು" ವೃತ್ತಿ ವೇತನದ ರೂಪದಲ್ಲಾಗಲೀ ಅಥವಾ ಅನ್ಯಥಾ ಲಾಭದ

BLm/3226/13



ರೂಪದಲ್ಲಾಗಲೀ ಯಾವುದೇ ಸದಸ್ಯನಿಗೆ ಅಥವಾ ಯಾವುದೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿನಿಯೋಗಿಸುವುದು ನಿಷೇಧಿಸಲ್ಪಟ್ಟಿದೆ. ನಿಯಮ 17ರನ್ವಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ದುರ್ವರ್ತನೆ, ದುರ್ನಡತೆ ಅಥವಾ ಅಸಭ್ಯ ವರ್ತನೆ ಹಾಗೂ ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗಕ್ಕೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗುತ್ತಾರೆ;

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

10. 2 ರಿಂದ 6ನೇ ಎದುರುದಾರರುಗಳು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳಾಗಿದ್ದು, 2ನೇ ಎದುರುದಾರರು ಶೂ–ಸಾಕ್ಸ್ ಖರೀದಿ ಸಮಿತಿಯ ಅಧ್ಯಕ್ಷರು ಮತ್ತು 3 ರಿಂದ 6ನೇ ಎದುರುದಾರರುಗಳು ನಾಮ ನಿರ್ದೇಶಿತ ಸದಸ್ಯರುಗಳಾಗಿರುತ್ತಾರೆ. ಶೂ–ಸಾಕ್ಸ್ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ಮೇಲ್ನೋಟಕ್ಕೆ ಕಂಡು ಬರುವುದರಿಂದ, ಸದರಿಯವರುಗಳ ವಿರುದ್ಧ ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು, 2006ರ ಉಪವಿಧಿ 17ಸಿ(vii), 17ಸಿ(ix) ಮತ್ತು 17ಇ ಗಳನ್ವಯ ಶಿಸ್ತು ಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11. 1ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ. ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಸಕ್ಷಮ ಪ್ರಾಧಿಕಾರವನ್ನು ಕೋರಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

30.1.21

**(ನ್ಯಾಯಾಮೂರ್ತಿ ಬಿ.ಎಸ್.ಪಾಟೀಲ್)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**

30/1